


# ‘ಸಹಬಾಳ್ವೆ’ಯ ಜೋಡಿಯ ಸಹಮತದ ಮಾತು!

**ಸು**ದೀರ್ಘ ಕಾಲ ‘ಲಿವ್ ಇನ್’ ರಿಲೇಷನ್‌ಶಿಪ್‌ನಲ್ಲಿ ಜೊತೆಗಿದ್ದು, ಕೊನೆಗೆ ಹಸೆಮಣೆಯನ್ನೂ ಏರಿದ ಬಿ–ಟೌನ್‌ನ ಯಶಸ್ವಿ ಜೋಡಿ ಸೋಹಾ ಅಲಿ ಖಾನ್ ಮತ್ತು ಕುನಾಲ್ ಖೇಮು. ಸಾಮಾನ್ಯವಾಗಿ ಬಿ–ಟೌನ್‌ನಲ್ಲಿ ಅಧಿಕೃತವಾಗಿ ಘೋಷಣೆಯಾದ ‘ಸಹಬಾಳ್ವೆ’ ಇಷ್ಟು ದೀರ್ಘ ಸಮಯ ಉಳಿದ ಉದಾಹರಣೆ ಮತ್ತೊಂದಿಲ್ಲ. ‘ಜನರಿಗಾಗಿ ಲಿವ್ ಇನ್ ಸಂಬಂಧದ ಪರವಾಗಿ ನಾವು ಮಾತನಾಡುವುದಿಲ್ಲ. ಅದನ್ನು ಪ್ರಚೋದಿಸುವುದೂ ಇಲ್ಲ. ಆದರೆ ನಮ್ಮಿಬ್ಬರ ಮಟ್ಟಿಗೆ ಮದುವೆಗೂ ಮುನ್ನ ಆ ಬಾಂಧವ್ಯ ಚೆನ್ನಾಗಿಯೇ ಇತ್ತು. ಮದುವೆಯಾದ ಬಳಿಕವೂ ಅದು ಬದಲಾಗಿಲ್ಲ’ ಎಂದಿದ್ದಾರೆ ಖೇಮು ಮತ್ತು ಸೋಹಾ.

ಕುನಾಲ್‌ನನ್ನು ಅರ್ಥ ಮಾಡಿಕೊಳ್ಳಲು, ಆತನೊಂದಿಗೆ ಹೊಂದಾಣಿಕೆಯ ಬದುಕಿಗೆ ಲಿವ್ ಇನ್ ಸಂಬಂಧ ಸಹಾಯ ಮಾಡಿದೆ. ಹಾಗೆಂದು ಉಳಿದವರೂ ಅದನ್ನು ಪಾಲಿಸಬೇಕು ಎನ್ನುವುದಿಲ್ಲ. ಪ್ರತಿಯೊಬ್ಬರೂ ಅವರದೇ ಬದುಕಿನ ಹಾದಿ ರೂಪಿಸಿಕೊಳ್ಳುವುದು ಒಳಿತು– ಎಂದು ಸಲಹೆ ನೀಡಿದ್ದಾಳೆ ಸೋಹಾ. ಇದೇ ಮಾತನ್ನು ಖೇಮು ಅನುಮೋದಿಸಿದ್ದಾನೆ. ಪ್ರತಿಯೊಬ್ಬರ ಜೀವನದಲ್ಲೂ ಏರಿಳಿತಗಳಿರುತ್ತವೆ. ಹೀಗಾಗಿ ಎಲ್ಲರೂ ಹೀಗೆಯೇ ಇರಬಹುದು ಎನ್ನಲಾಗದು ಎನ್ನುವುದು ಈ ಇಬ್ಬರ ತರ್ಕ.

ಮುಂಬೈನಂತಹ ಮಹಾನಗರಿಯಲ್ಲಿನ ಜನರ ಮನಸ್ಸು ಸಂಕುಚಿತವಾಗಿಲ್ಲ. ಸಹಬಾಳ್ವೆಯ ವ್ಯವಸ್ಥೆಯನ್ನು ಒಪ್ಪಿಕೊಳ್ಳುವಷ್ಟು, ಬೇರೆಯವರ ದೃಷ್ಟಿಕೋನಗಳನ್ನು ಗೌರವಿಸುವಷ್ಟು ವಿಶಾಲ ಮನಸ್ಸಿನವರು ಎನ್ನುವುದು ಅವರ ಅಭಿಪ್ರಾಯ. ಮತ್ತೆ ಇಷ್ಟು ಕಾಲ ಒಟ್ಟಿಗೆ ಚೆನ್ನಾಗೇ ಇದ್ದವರು ಮದುವೆಯ ಬಂಧಕ್ಕೆ ಸಿಲುಕಿಕೊಂಡಿದ್ದೇಕೆ ಎಂಬ ಪ್ರಶ್ನೆಗೆ ಇಬ್ಬರೂ ನೀಡುವ ಉತ್ತರವೂ ಒಂದೇ, ‘ಮನೆಯವರ ಖುಷಿಗಾಗಿ’!

# ಪ್ರೀತಿಗಾಗಿ ಸಿನಿಮಾ ಬಿಟ್ಟಿದ್ದ ಪೂಜಾ!

**ಮ**ಹೇಶ್ ಭಟ್ ನಿರ್ದೇಶನದ ‘ಆಶಿಕಿ’ ಚಿತ್ರ ಎರಡು ದಶಕಗಳ ಹಿಂದಿನ ಸಿನಿಮಾ ರಸಿಕರಿಗೆ ನೆನಪಿರಲೇಬೇಕು. ಹಾಡುಗಳಿಂದಲೇ ಜನಪ್ರಿಯವಾಗಿ ಯಶಸ್ಸನ್ನು ಕಂಡ ಚಿತ್ರವದು. ಈಗಿನ ತಲೆಮಾರಿನ ಪ್ರೇಕ್ಷಕರಲ್ಲೂ ಅದರ ಎರಡನೇ ಆವೃತ್ತಿಯ ಹಾಡುಗಳೂ ಹೀಗೆಯೇ ಕಿಚ್ಚು ಹಿಡಿಸಿತ್ತು. 1990ರಲ್ಲಿ ತೆರೆಕಂಡ ಈ ಚಿತ್ರದ ನಾಯಕಿ ಅನು ಅಗರ್‌ವಾಲ್. ಆದರೆ ವಾಸ್ತವವಾಗಿ ಇದರಲ್ಲಿ ನಾಯಕಿಯಾಗಿ ನಟಿಸಬೇಕಾಗಿದ್ದು ಮಹೇಶ್ ಭಟ್ ಮಗಳು ಪೂಜಾ ಭಟ್. ಚಿತ್ರಕ್ಕೆ ಬಂಡವಾಳ ಹೂಡುತ್ತಿದ್ದ ಚಿಕ್ಕಪ್ಪ ಮುಕೇಶ್ ಭಟ್, ಈ ಚಿತ್ರದಲ್ಲಿ ನಟಿಸುವ ಅಪೂರ್ವ ಅವಕಾಶ ಮುಂದಿಟ್ಟಾಗ ಒಲ್ಲೆ ಎಂದು ದೂರ ಸರಿದಿದ್ದಳು ಪೂಜಾ. ಈಗ ಅದಕ್ಕಾಗಿ ಪಶ್ಚಾತ್ತಾಪ ಪಡುತ್ತಿರುವ ಆಕೆ ಅದಕ್ಕೆ ಕಾರಣವನ್ನೂ ಬಹಿರಂಗಪಡಿಸಿದ್ದಾಳೆ.

‘ಡ್ಯಾಡಿ’ ಚಿತ್ರದ ಮೂಲಕ ಚಿತ್ರರಂಗಕ್ಕೆ ಪ್ರವೇಶಿಸಿದವಳು ಪೂಜಾ. ಆಕೆಗೆ ಆಗ ವಯಸ್ಸು 17. ಬಣ್ಣ ಹಚ್ಚುವ ಮೊದಲೇ ಪ್ರೀತಿಯಲ್ಲಿ ಬಿದ್ದಿದ್ದಳು ಆಕೆ. ಆಗ ಪೂಜಾಳ ವಯಸ್ಸೆಷ್ಟು ಗೊತ್ತೇ? ಕೇವಲ 12. ಹದಿನಾರನೇ ವಯಸ್ಸಿಗೆ ಬಂದಾಗ ಬಾಯ್‌ಫ್ರೆಂಡ್ ಜೊತೆ ಡೇಟಿಂಗ್ ಶುರು ಮಾಡಿಕೊಂಡಿದ್ದಳಂತೆ. ಎರಡನೇ ಸಿನಿಮಾ ‘ದಿಲ್ ಹೈ ಕಿ ಮಾನ್‌ತಾ ನಹಿ’ ಚಿತ್ರದ ಬಳಿಕ ‘ನೀನು ನನ್ನನ್ನು ಮದುವೆಯಾಗಬೇಕೆಂದಿದ್ದರೆ ಸಿನಿಮಾ ಮಾಡುವುದನ್ನು ಬಿಡು. ನಾನು ನಟಿಯನ್ನು ಮದುವೆಯಾಗಲು ಬಯಸುವುದಿಲ್ಲ’ ಎಂಬ ಗೆಳೆಯನ ಷರತ್ತನ್ನು ಪೂಜಾ ಮರುಮಾತಿಲ್ಲದೆ ಒಪ್ಪಿಕೊಂಡಿದ್ದಳಂತೆ.

“ಪ್ರೀತಿಯಾಗಿ ಏನು ಮಾಡಲೂ ನಾನು ಸಿದ್ಧಳಿದ್ದೆ. ಚಿಕ್ಕಪ್ಪ ಮತ್ತು ಅಪ್ಪ ಸೇರಿದಂತೆ ಹಲವರು ‘ಆಶಿಕಿ’ಯಲ್ಲಿ ನಟಿಸುವಂತೆ ಎಷ್ಟೇ ಒತ್ತಾಯಿಸಿದರೂ ಒಪ್ಪಿಕೊಳ್ಳಲಿಲ್ಲ. ಕಾಲಾಂತರದಲ್ಲಿ ಆತನೊಂದಿಗಿನ ಸಂಬಂಧ ಕಡಿದುಹೋಯಿತು. ಈಗಲೂ ಆತ ನನಗೆ ಒಳ್ಳೆಯ ಸ್ನೇಹಿತ. ನಂತರ ಬದುಕು ಬದಲಾಯಿತು. ಆ ಸಿನಿಮಾ ಮಾಡಬೇಕಿತ್ತು ಎಂದು ಈಗ ಅನ್ನಿಸುತ್ತಿದೆ” ಎಂದು ಭಾವುಕಳಾಗಿ ಹೇಳಿಕೊಂಡಿದ್ದಾಳೆ ಪೂಜಾ. ಆದರೆ ನಟನೆಯ ಕುರಿತು ಅಷ್ಟೇನೂ ಆಸಕ್ತಿ ಇರಲಿಲ್ಲ. ತನಗಿದ್ದದ್ದು ನಿರ್ದೇಶನದತ್ತ ಒಲವು. ಈಗ ಮತ್ತೆ ಕ್ಯಾಮೆರಾ ಮುಂದೆ ನಿಲ್ಲಬೇಕು ಎಂಬ ಬಯಕೆ ಮೂಡುತ್ತಿದೆ ಎಂದಿದ್ದಾಳೆ 43ರ ಹರೆಯದ ಪೂಜಾ. ಒಂದು ಮಧುರ ಪ್ರೇಮದ ಕುರಿತ ಸಿನಿಮಾದ ಹಿಂದೆ ಹೀಗೊಂದು ಪ್ರೀತಿಗಾಗಿ ಮಾಡಿದ ತ್ಯಾಗದ ಕಥೆಯೂ ಇದೆ ನೋಡಿ!

■ **ಅಮಿ**

